

ಶತಮಾನದಲ್ಲಿ ರಾಜ ಸಾಲೊಮನ್‌ನ ದೋಣಿಗಳಲ್ಲಿ ಸಂಬಾರು ಪದಾರ್ಥಗಳ ವಹಿವಾಟು ನಡೆಸಲು ಮಲಬಾರಿಗೆ ಮೊದಲ ಬಾರಿಗೆ ಯಹೂದಿಯರು ಆಗಮಿಸಿದರು ಎಂದು ಕೆಲವು ಕಡೆ ಉಲ್ಲೇಖವಿದೆ. ಇವರನ್ನು ಆಗಿನ ರಾಜ ಸ್ವಾಗತಿಸಿ, ಆಶ್ರಯ ನೀಡಿದ. ತಮ್ಮ ಮೇಲೆ ಪೋರ್ಚುಗೀಸರು ಮತ್ತು ಡಚ್ಚರು ಆಗಾಗ್ಗೆ ನಡೆಸಿದ ದಾಳಿಗಳಿಂದ ಯಹೂದಿಗಳು ಕೇರಳದಾದ್ಯಂತ ಚದುರಿ ಹೋಗಿದ್ದೂ ಇದೆ.

ಕೊಚಿನ್‌ಗೆ ಬಂದವರು ಜ್ಯೂ ಟೌನಿಗೆ ಬಾರದಿರುವರೇ? ಎಂಬುದು ಈ ಓಣಿಯ ಅಗ್ಗಳಿಕೆ. ಮೈತುಂಬ ಯಹೂದಿಯರ ಸಂಸ್ಕೃತಿಯನ್ನು ಹೊದ್ದಿರುವ ಈ 'ಯಹೂದಿ ಬೀದಿ' (Jew Town) ಯಲ್ಲಿ ಓಡಾಡುತ್ತಿದ್ದರೆ, ಕಾಲವು ಶತಮಾನಗಳಷ್ಟು ಹಿಂದೆ ಸರಿದಂತೆ ಭಾಸವಾಗುತ್ತದೆ! ಹಲವು ಕಾರಣಗಳಿಂದಾಗಿ ಯೂರೋಪಿನಿಂದ ನಿರಾಶ್ರಿತರಾಗಿ ಬೇರೆ ಬೇರೆ ದೇಶಗಳೆಡೆಗೆ ವಲಸೆ ಹೋದ ಯಹೂದಿಯರ ಪೈಕಿ ಒಂದಷ್ಟು ಮಂದಿ ಕೇರಳದ ವಿವಿಧ ಭಾಗಗಳಿಗೆ ಬಂದು ನೆಲೆಗೊಂಡರು. ಆ ರೀತಿಯಲ್ಲೇ, 16ನೇ ಶತಮಾನದ ಆರಂಭದಲ್ಲಿ ಸ್ಪೇನ್ ದೇಶದಿಂದ ಹೊರದೂಡಲ್ಪಟ್ಟ ಯಹೂದಿಗಳು ಕ್ರಿ.ಶ 1524ರ ಸುಮಾರಿಗೆ ಕೊಚಿನ್‌ಗೆ ಬಂದಿಳಿದರು. ಆಗಿನ ಅರಸು ಅವರಿಗೆ ಆಶ್ರಯದ ಜತೆಗೆ ಆಸ್ತಿ ಹಾಗೂ ಧಾರ್ಮಿಕ ಸ್ವಾತಂತ್ರ್ಯ ನೀಡಿದ. ಅವರ ಮನೆಗಳು ಹಾಗೂ ವ್ಯಾಪಾರ ವಹಿವಾಟಿನ ಕೇಂದ್ರ ತಾಣ ಕೊಚಿನ್‌ನ ಕಡಲ ತಡಿಯೇ ಆಗಿತ್ತು. ಅದೇ ಈಗಿನ 'ಜ್ಯೂ ಟೌನ್'.

## ಪೇಟೆಯಲ್ಲಿ ಒಂದು ಸುತ್ತು

ಸುಮಾರು ಒಂದೂವರೆ ಕಿಲೋಮೀಟರ್ ಉದ್ದದ 'ಜ್ಯೂ ಸ್ಟ್ರೀಟ್'ನಲ್ಲಿ ಸುತ್ತಾಡಲು ಹೊರಡುವುದೆಂದರೆ, ಒಂದು ಬಗೆಯಲ್ಲಿ ಟೈಂ ಕ್ಯಾಪ್ಸೂಲ್‌ನಲ್ಲಿ ಕೂತು ಹಿಂದಕ್ಕೆ ಪಯಣಿಸಿದಂತೆ! ಮಟ್ಟಂಚೆರಿ ಅರಮನೆಯಿಂದ ಹೊರಬಂದು ಸಮುದ್ರದ ದಂಡೆಯಲ್ಲಿ ಬಲಕ್ಕೆ ನಡೆಯುತ್ತ ಸಾಗಿದರೆ, ಆರಂಭದಲ್ಲೇ ಅಳವಡಿಸಿರುವ 'ಜ್ಯೂ ಟೌನ್' ಫಲಕವು ವಸಾಹತುಶಾಹಿ ಪಳೆಯುಳಿಕೆಯ ಪೇಟೆಗೆ



ಪರದೇಸಿ ಸಿನೆಗಾಗ್‌ನ ಹೊರಗೆ ಗಡಿಯಾರ ಗೋಪುರ; ಮೇಲ್ಭಾಗದಲ್ಲಿ ಗಂಟೆ ಬಾರಿಸುವ ಘಟಕ

ಜ್ಯೂ ಟೌನಿನಲ್ಲಿ ಕಂಡ ಇನ್ನೂರು ವರ್ಷಗಳ ಹಿಂದಿನ ಯಹೂದಿ ಮನೆ

